# ಪ್ರಕಾಶನ ವಿಭಾಗವನ್ನು ಬೆಳಸಿದ ಮಹನೀಯರು

**ಸ್ವಾಮಿ ನಿತ್ಯಸ್ಥಾನಂದ**

ಮೈಸೂರು ಶ್ರೀರಾಮಕೃಷ್ಣ ಆಶ್ರಮವು ರಾಮಕೃಷ್ಣ ಮಹಾಸಂಘದ ಕನ್ನಡ ಪುಸ್ತಕಗಳ ಪ್ರಕಾಶನ ಕೇಂದ್ರವಾಗಿದೆ. ೧೯೨೫ರಲ್ಲಿ ಆಶ್ರಮ ಆರಂಭವಾದ ಬಳಿಕ ಅಲ್ಪಕಾಲದಲ್ಲೇ ಇಲ್ಲಿ ಪುಸ್ತಕ ಪ್ರಕಾಶನ ಕಾರ್ಯ ಆರಂಭವಾಯಿತು. ಈ ಪ್ರಕಾಶನ ಕೇಂದ್ರದಲ್ಲಿ ಬಹಳ ಕಾಲದಿಂದ ಸೇವೆ ಸಲ್ಲಿಸಿದ್ದ ಲೇಖಕರು ಇಲ್ಲಿನ ಕೆಲಸಕಾರ್ಯಗಳನ್ನು ಹತ್ತಿರದಿಂದ ಕಂಡವರು. ಅವರು 'ವಿವೇಕಪ್ರಭ'ದ ಮೊದಲನೆಯ ಸಂಪಾದಕರಾಗಿದ್ದರು; ಹಾಗೂ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದರು. ಪ್ರಸಿದ್ಧ ಪ್ರವಚನಕಾರರೂ, ಬರಹಗಾರರೂ, ಉತ್ತಮ ಚಿಂತಕರೂ ಆಗಿರುವ ಪೂಜ್ಯ ಸ್ವಾಮೀಜಿಯವರು ಅನೇಕ ಗ್ರಂಥಗಳನ್ನು ರಚಿಸಿದ್ದು, ಪ್ರಸ್ತುತ ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದಾರೆ.



ಸ್ವಾಮಿ ಸೋಮನಾಥಾನಂದ

ಧರ್ಮದ ಎರಡು ಮುಖಗಳನ್ನು ಗುರುತಿಸಲಾಗಿದೆ. ಒಂದು ಅನುಭವ, ಮತ್ತೊಂದು ಅಭಿವ್ಯಕ್ತಿ. ಪ್ರತಿಯೊಂದು ಧರ್ಮವೂ ಯಾವುದೋ ಒಬ್ಬ ವ್ಯಕ್ತಿಯ ಅಥವಾ ಅನೇಕ ವ್ಯಕ್ತಿಗಳ ಅತೀಂದ್ರಿಯ, ಪ್ರಜ್ಞಾತೀತ ಅನುಭವದ ಆಧಾರದ ಮೇಲೆ ಹುಟ್ಟಿ ಬಂದಿರುತ್ತದೆ. ಕ್ರೈಸ್ತಧರ್ಮವು ಕ್ರಿಸ್ತನ ಅನುಭವವನ್ನು ಇಸ್ಲಾಂ ಧರ್ಮವು ಮಹಮ್ಮದನ ಅನುಭವವನ್ನು, ಬೌದ್ಧ ಧರ್ಮವು ಬುದ್ಧನ ಅನುಭವವನ್ನು, ಹಾಗೆಯೇ ಹಿಂದೂ ಧರ್ಮವು ವೈದಿಕ ಋಷಿಗಳ ಅನುಭವಗಳನ್ನು ಆಧರಿಸಿವೆ.

ಈ ಅನುಭವಗಳು ಮುಂದೆ ಅನೇಕ ರೂಪಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ. ಸಂಘಸಂಸ್ಥೆಗಳು, ವಿವಿಧಶಾಸ್ತ್ರಗ್ರಂಥಗಳು, ಚರ್ಚು-ಮಸೀದಿ-ದೇವಾಲಯಗಳು, ಅನೇಕ ಪೂಜಾವಿಧಾನಗಳು, ಕ್ರಿಯಾವಿಧಿಗಳು, ಪುರಾಣಕಥೆಗಳು, ಉತ್ಸವಗಳು - ಇವೇ ಮುಂತಾದ ವಿವಿಧ ರೂಪಗಳಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಇನ್ನೂ ಮುಂದುವರಿದು ಸಂಗೀತ ಸಾಹಿತ್ಯ ಕಲೆಗಳ ರೂಪದಲ್ಲಿಯೂ ಇವು ಅಭಿವ್ಯಕ್ತಗೊಳ್ಳುತ್ತವೆ. ಇಷ್ಟೇ ಅಲ್ಲದೆ ಅನೇಕ ಮತಪಂಥಗಳೂ ಹುಟ್ಟಿಕೊಳ್ಳುತ್ತವೆ.


ಈಗ ಶ್ರೀರಾಮಕೃಷ್ಣರ ವಿಚಾರಕ್ಕೆ ಬಂದರೆ, ಅವರ ಅನುಭವಗಳು ಮುಂದೆ ಸಂಘರೂಪವನ್ನು ಪಡೆಯಿತು. ಅನೇಕ ದೇವಾಲಯಗಳು ಪೂಜಾಪದ್ಧತಿಗಳು ಹುಟ್ಟಿಕೊಂಡವು ಹಾಗೂ ಅನೇಕ ಭಾಷೆಗಳಲ್ಲಿ ವಿಸ್ತಾರವಾದ ಸಾಹಿತ್ಯರಾಶಿಯೂ ಬೆಳೆಯಿತು. ಕನ್ನಡ ಭಾಷೆಯು ಈ ವಿಷಯದಲ್ಲಿ ಹಿಂದುಳಿಯಲಿಲ್ಲ. ಕನ್ನಡದ ಅನೇಕ ಸಾಹಿತಿಗಳು ದಿವ್ಯತ್ರಯರ ಭಾವಧಾರೆಯ ಪ್ರಭಾವಕ್ಕೆ ಒಳಪಟ್ಟು ಅವರ ಬಗ್ಗೆ ಹಲವು ಕೃತಿಗಳನ್ನು ರಚಿಸಿರುವರು. ಈ ವಿಷಯದಲ್ಲಿ ಸ್ವಾಮಿ ಸೋಮನಾಥಾನಂದಜಿಯವರ ಕೊಡುಗೆ ಅಪಾರವಾದುದು. ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಪ್ರಕಟನಾ ವಿಭಾಗವು ಪ್ರಾರಂಭವಾಗುವುದಕ್ಕೆ ಮೂಲ ಪುರುಷರು ಸ್ವಾಮಿ ಸೋಮನಾಥಾನಂದರು. ಆಗ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಶಾಂಭವಾನಂದಜಿಯವರು ಈ ವಿಷಯದಲ್ಲಿ ಪೂರ್ಣ ಸ್ವಾತಂತ್ರ್ಯವನ್ನಿತ್ತರು.

ಸ್ವಾಮಿ ಸೋಮನಾಥಾನಂದಜಿಯವರು ಸಮೃದ್ಧ ಬರಹಗಾರರು ಮಾತ್ರವಲ್ಲದೆ ಉತ್ತಮ ವಾಗ್ಮಿಗಳೂ ಆಗಿದ್ದರು. ಸೋಮನಾಥಾನಂದರು ಬರೆದ ಪುಸ್ತಕಗಳೊಂದಿಗೆ ಮೈಸೂರು ಆಶ್ರಮದ ಪ್ರಕಟನಾ ವಿಭಾಗವು ಪ್ರಾರಂಭವಾಯಿತು ಎಂದು ಹೇಳಬಹುದು. ದಿವ್ಯತ್ರಯರ ಸಂಕ್ಷಿಪ್ತ, ಮಧ್ಯಮ ಮತ್ತು ವಿಸ್ತೃತ- ಹೀಗೆ ವಿವಿಧ ಬಗೆಯ ಜೀವನಚರಿತ್ರೆಗಳನ್ನು ಅವರು ಬರೆದು ಪ್ರಕಟಿಸಿದರು. 'The Complete Works of Swami


Vivekananda' ಗ್ರಂಥದ ಹೆಚ್ಚು ಭಾಗಗಳನ್ನು ತಾವೇ ಅನುವಾದಿಸಿ ಉಳಿದ ಭಾಗಗಳನ್ನು ಬೇರೆಯವರ ಅನುವಾದಗಳಿಂದ ಸಂಗ್ರಹಿಸಿ ಹತ್ತು ಸಂಪುಟಗಳಲ್ಲಿ ಅದನ್ನು ಪ್ರಕಟಿಸಿದರು. ಅವರದೇ ಸ್ವಂತ ಕೃತಿಗಳು ಅನೇಕ. ಅವುಗಳಲ್ಲಿ 'ಗೀತಾಭಾವಧಾರೆ' ಅತ್ಯಂತ ಜನಪ್ರಿಯವಾದುದು. ಇನ್ನೊಂದು ಅವರ ಪ್ರಸಿದ್ಧ ಕೃತಿ 'ಉಪನಿಷತ್ ಭಾವಧಾರೆ.' ಅವರ ಉದಾರ ಬುದ್ಧಿಯನ್ನು ಪ್ರತಿಬಿಂಬಿಸುವ ಇನ್ನೊಂದು ಕಾರ್ಯವಿದೆ. ಅಲ್ಲಿಯೇ ಇದ್ದ ಯುವ ಸಂನ್ಯಾಸಿಯೊಬ್ಬನಿಗೆ ಉತ್ತೇಜನವಿತ್ತು ಅವರಿಂದ ಅನೇಕ ಪುಸ್ತಕಗಳನ್ನು ಬರೆಸಿ, ಅನುವಾದಿಸಿ ಪ್ರಕಟಿಸಿದರು.

ಸೋಮನಾಥಾನಂದಜಿಯವರ ಕಾರ್ಯಕ್ಷಮತೆ ಅತ್ಯಂತ ಶ್ಲಾಘನೀಯವಾದುದು. ಅವರೇ ಪುಸ್ತಕಗಳನ್ನು ಬರೆದು, ಮುದ್ರಣಕ್ಕೆ ಕೊಟ್ಟು, ಕರಡುಪ್ರತಿ ತಿದ್ದಿ, ಮುದ್ರಣದ ನಂತರ ಪುಸ್ತಕಗಳನ್ನು ಪ್ಯಾಕ್ ಮಾಡಿ, ರಾಜ್ಯದ ವಿವಿಧ ಪುಸ್ತಕ ಮಾರಾಟಗಾರರಿಗೆ ಕಳಿಸಿಕೊಡುತ್ತಿದ್ದರು. ಇದಕ್ಕೆ ಸಂಬಂಧಪಟ್ಟ ಎಲ್ಲ ಲೆಕ್ಕ ವ್ಯವಹಾರಗಳ ಜವಾಬ್ದಾರಿಯೂ ಅವರದೇ ಆಗಿತ್ತು. ಪುಸ್ತಕ ಬರೆಯುವುದರಿಂದ ಹಿಡಿದು ಅದು ಓದುಗರ ಕೈಸೇರುವ ವರೆಗಿನ ಎಲ್ಲ ಕೆಲಸವೂ ಅವರದೇ ಆಗಿತ್ತು! ಅವರು ಉಪನ್ಯಾಸಕ್ಕಾಗಿ ಬೇರೆ ಬೇರೆ ಕಡೆ ಹೋದಾಗಲೆಲ್ಲ ಪುಸ್ತಕಗಳನ್ನು ತಮ್ಮೊಡನೆ ತೆಗೆದುಕೊಂಡು ಹೋಗಿ, ಅಲ್ಲಿ ಅವುಗಳ ಮಾರಾಟದ ವ್ಯವಸ್ಥೆ ಮಾಡುತ್ತಿದ್ದರು. ಅವರ ಕಾಲದಲ್ಲಿ ಪ್ರಕಟವಾದ ಇನ್ನೊಂದು ಅತ್ಯಂತ ಜನಪ್ರಿಯವಾದ ಪುಸ್ತಕ ಸ್ವಾಮಿ ಜಗದಾತ್ಮಾನಂದಜಿಯವರ 'ಬದುಕಲು ಕಲಿಯಿರಿ.' ಇದರ ಲಕ್ಷಾಂತರ ಪ್ರತಿಗಳು ಜನರನ್ನು ತಲುಪಿರುವುದು ಮಾತ್ರವಲ್ಲದೆ, ಇದು ಅನೇಕ ಭಾಷೆಗಳಿಗೆ ಅನುವಾದಗೊಂಡಿದೆ.


ಸ್ವಾಮಿ ಜಗದಾತ್ಮಾನಂದ


ಸ್ವಾಮಿ ಆದಿದೇವಾನಂದ

ಮೈಸೂರು ಆಶ್ರಮದಿಂದ ಆದ ಶಾಸ್ತ್ರ ಗ್ರಂಥಗಳ ಪ್ರಕಟನೆಯ ವಿಚಾರಕ್ಕೆ ಬಂದಾಗ, ಮೊಟ್ಟಮೊದಲು ನಮ್ಮ ನೆನಪಿಗೆ ಬರುವುದು ಸ್ವಾಮಿ ಆದಿದೇವಾನಂದರ ಹೆಸರು. ಅವರ ಪ್ರಸ್ಥಾನ ತ್ರಯಗಳ ಕನ್ನಡಾನುವಾದ ಬಹಳ ಪ್ರಸಿದ್ಧವಾಗಿದೆ. ಪ್ರಸಿದ್ಧವಾದ ಹನ್ನೊಂದು ಉಪನಿಷತ್ತುಗಳನ್ನು ಪ್ರತಿಪದದ ಅರ್ಥ ತಾತ್ಪರ್ಯ ಮತ್ತು ಟಿಪ್ಪಣಿಗಳೊಡನೆ ಅನುವಾದಿಸಿ ಶಾಸ್ತ್ರಾಧ್ಯಯನಾಸಕ್ತರಿಗೆ ಮಹದುಪಕಾರ ಮಾಡಿರುವರು. ಹೀಗೆಯೇ ಭಗವದ್ಗೀತೆಯ ಕನ್ನಡಾನುವಾದವನ್ನೂ ಮಾಡಿರುವರು. ಆಚಾರ್ಯತ್ರಯರ ಭಾಷ್ಯಗಳ ಸಂಗ್ರಹಾನುವಾದದೊಂದಿಗೆ ಬಾದರಾಯಣರ 'ಬ್ರಹ್ಮಸೂತ್ರ' ಗಳನ್ನು ಹೊರತಂದಿರುವುದು ಅವರ ಒಂದು ವಿಶೇಷ ಕೊಡುಗೆ. ಪದಶಃ ಅರ್ಥ, ತಾತ್ಪರ್ಯ, ಟಿಪ್ಪಣಿಗಳೊಂದಿಗೆ ಶಂಕರಾಚಾರ್ಯರ 'ವಿವೇಕಚೂಡಾಮಣಿ'ಯನ್ನೂ ಕನ್ನಡಿಗರಿಗೆ ನೀಡಿರುವರು. ವಿದ್ಯಾರಣ್ಯರ 'ಪಂಚದಶೀ'ಯನ್ನೂ ಇದೇ ರೀತಿ ಅನುವಾದಿಸಿ ವಿದ್ವಜ್ಜನರ ಮನ ಸೆಳೆದಿರುವರು. ಪಾತಂಜಲ ಯೋಗಸೂತ್ರಗಳನ್ನೂ ಅವರು ಬಿಟ್ಟಿಲ್ಲ. ಅದರ ಮೇಲಿರುವ ಪ್ರಸಿದ್ಧ ವ್ಯಾಸಭಾಷ್ಯವನ್ನು ಸೂತ್ರಗಳೊಂದಿಗೆ ಅನುವಾದಿಸಿ ಮಹತ್ಕಾರ್ಯ ಸಾಧಿಸಿರುವರು. ಇನ್ನೊಂದು ಅವರ ವಿಶೇಷ ಕೊಡುಗೆ 'ಲಲಿತಸಹಸ್ರನಾಮ'ದ ಭಾಷ್ಯ ಸಮೇತ ಅನುವಾದ. ಹೀಗೆ ಸ್ವಾಮಿ ಆದಿದೇವಾನಂದಜಿಯವರ ವಿದ್ವತ್ಪೂರ್ಣ ಗ್ರಂಥಗಳಿಂದಾಗಿ ಪ್ರಕಟನಾ ವಿಭಾಗವು ಸಮೃದ್ಧವಾಗಿ ಬೆಳೆಯಿತು.


ಸ್ವಾಮಿ ಹರ್ಷಾನಂದ

ಇನ್ನೊಬ್ಬ ಮಹನೀಯರ ಕೊಡುಗೆ ಗಣನೀಯವಾದುದು. ಅವರೇ ಸ್ವಾಮಿ ಹರ್ಷಾನಂದಜಿಯವರು. ಶ್ರೀಶಂಕರಾಚಾರ್ಯರ 'ಆತ್ಮಬೋಧ, ಅಪರೋಕ್ಷಾನುಭೂತಿ, ವಾಕ್ಯವೃತ್ತಿ, ಲಘುವಾಕ್ಯವೃತ್ತಿ', 'ವೇದಾಂತ ಸಾರ', 'ಜೀವನ್ಮುಕ್ತಿವಿವೇಕ' ಇವೇ ಮುಂತಾದ ವೇದಾಂತದ ಪ್ರಕರಣ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿರುವುದು ಮಾತ್ರವಲ್ಲದೆ, 'ನಾರದ ಭಕ್ತಿಸೂತ್ರಗಳು', 'ಪಾತಂಜಲ ಯೋಗಸೂತ್ರಗಳು' ಇವುಗಳನ್ನು ತಮ್ಮದೇ ವ್ಯಾಖ್ಯಾನದೊಡನೆ ಅನುವಾದಿಸಿದರು. ಇವರ ಹಲವು ಕೃತಿಗಳು ಮೈಸೂರು ಆಶ್ರಮದಿಂದ ಪ್ರಕಟವಾಗಿವೆ. ಶಾಸ್ತ್ರಾಧ್ಯಯನದಲ್ಲಿ ಅಭಿರುಚಿಯುಳ್ಳವರಿಗೆ ಸ್ವಾಮಿ ಹರ್ಷಾನಂದರಿಂದ ಆಗಿರುವ ಉಪಕಾರ ಅವಿಸ್ಮರಣೀಯವಾದುದು.

ಇನ್ನೊಬ್ಬ ಮಹನೀಯರು ಪ್ರಸಿದ್ಧ ಗಾಯಕರೂ, ಉಪನ್ಯಾಸಕರೂ, ಬರಹಗಾರರು, ಅತ್ಯಂತ ಜನಪ್ರಿಯರೂ ಆದ ಸ್ವಾಮಿ ಪುರುಷೋತ್ತಮಾನಂದಜಿಯವರು. ಅವರ ಮೇರುಕೃತಿ 'ಶ್ರೀಶಾರದಾದೇವಿ ಜೀವನಗಂಗಾ.' ಮೂರು ಸಂಪುಟಗಳಲ್ಲಿ ಸವಿಸ್ತಾರವಾದ ವಿವೇಕಾನಂದರ ಜೀವನಚರಿತ್ರೆಯನ್ನು ಬರೆದಿರುವರು. ಹಾಗೆಯೇ ಸವಿಸ್ತಾರವಾದ ಶ್ರೀರಾಮಕೃಷ್ಣರ ಜೀವನ ಚರಿತ್ರೆಯನ್ನೂ ಬರೆದಿರುವರು. ಅವರ 'ವಿದ್ಯಾರ್ಥಿಗಾಗಿ' ಪುಸ್ತಕದ ಲಕ್ಷಾಂತರ ಪ್ರತಿಗಳು ವಿದ್ಯಾರ್ಥಿಗಳನ್ನು ತಲುಪಿವೆ.


ಸ್ವಾಮಿ ಪುರುಷೋತ್ತಮಾನಂದ

ಇವಲ್ಲದೆ ಅವರ ಅನೇಕ ಕಿರುಹೊತ್ತಿಗೆಗಳು ಪ್ರಕಟವಾಗಿವೆ. ಇವೆಲ್ಲವೂ ಮೊದಲು ಬೆಂಗಳೂರು ಆಶ್ರಮದಿಂದ ಪ್ರಕಟವಾಗುತ್ತಿದ್ದು, ಪ್ರಧಾನ ಕೇಂದ್ರದ ಆದೇಶದ ಮೇರೆಗೆ, ಈಗ ಅವೆಲ್ಲವೂ ಮೈಸೂರು ಆಶ್ರಮಕ್ಕೆ ವರ್ಗಾಯಿಸಲ್ಪಟ್ಟಿವೆ. ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ 'ಸಸ್ವರ ವೇದಮಂತ್ರಾಃ', ಇನ್ನಿತರ ವೈದಿಕ ಹಾಗೂ ಪುರಾಣ ಗ್ರಂಥಗಳು ಈಗ ಮೈಸೂರಿಗೆ ವರ್ಗಾಯಿಸಲ್ಪಟ್ಟಿವೆ. ಹೀಗೆ ಮೈಸೂರು ಆಶ್ರಮದ ಪ್ರಕಟನಾ ವಿಭಾಗವು ಸಮೃದ್ಧವಾಗಿ ಬೆಳೆದುಕೊಂಡಿದೆ.

ಕೇವಲ ಸ್ವಾಮಿಗಳು ಮಾತ್ರವಲ್ಲದೆ, ಕೆಲವು ಭಕ್ತರ ಅನುವಾದಿತ ಮತ್ತು ಸ್ವಂತ ಕೃತಿಗಳೂ ಮೈಸೂರು ಆಶ್ರಮದಿಂದ ಪ್ರಕಟಗೊಂಡಿವೆ. ಶ್ರೀ ಕುವೆಂಪು ಅವರ ಎರಡು ವಿಶೇಷ ಕೃತಿಗಳು ಆಶ್ರಮದಿಂದ ಪ್ರಕಟಗೊಂಡಿವೆ. (೧) 'ಶ್ರೀರಾಮಕೃಷ್ಣ ಪರಮಹಂಸ' ಮತ್ತು (೨) 'ಸ್ವಾಮಿ ವಿವೇಕಾನಂದ'. ಇವೆರಡೂ ಕವಿಹೃದಯದಿಂದ ಹೊರಮೂಡಿದ ಜೀವನಚರಿತ್ರೆಗಳು. ಡಾ. ಹೆಚ್. ರಾಮಚಂದ್ರ ಸ್ವಾಮಿಯವರ ಹಲವು ಅನುವಾದಿತ ಕೃತಿಗಳು ಆಶ್ರಮದಿಂದ ಪ್ರಕಟಗೊಂಡಿವೆ. ಇವುಗಳಲ್ಲಿ ಪ್ರಸಿದ್ಧವಾದವು: 'ಭಗವದ್ಗೀತೆಯ ವಿಶ್ವಸಂದೇಶ', 'ದೇವರೊಡನೆ ಬಾಳಿದವರು', 'ಸ್ವಾಮಿ ವಿವೇಕಾನಂದರ ಸಂನ್ಯಾಸಿ ಶಿಷ್ಯರು' ಇವೇ ಮುಂತಾದವು. ಇವಲ್ಲದೆ ಅವರ ಹಲವು ಸ್ವಂತ ಕೃತಿಗಳೂ ಆಶ್ರಮದಿಂದ ಪ್ರಕಟಗೊಂಡಿರುವುವು. ಇವುಗಳಲ್ಲಿ ಮುಖ್ಯವಾದವು ಸಂಕ್ಷಿಪ್ತ ರಾಮಾಯಣ ಮತ್ತು ಮಹಾಭಾರತ. ರಾಮಕೃಷ್ಣ-ವಿವೇಕಾನಂದ ಸಾಹಿತ್ಯಕ್ಕೆ ಇವರ ಕೊಡುಗೆ ಅಪೂರ್ವವಾದುದು. ಶ್ರೀ ಸುರೇಶ ಕುಮಾರ ಅವರ ಹಿಂದಿಯಿಂದ ಅನುವಾದಿತ ಕೃತಿ 'ರಾಮಾಯಣ ಭಾವಧಾರೆ' ಆಶ್ರಮದಿಂದ ಪ್ರಕಟವಾಗಿದ್ದು, ಅವರ ವಾಲ್ಮೀಕಿ ರಾಮಾಯಣದ ಸಂಪೂರ್ಣ ಅನುವಾದವು ಈಗ ಮುದ್ರಣದ ಹಂತದಲ್ಲಿದೆ.

ಮಾತಾ ತ್ಯಾಗಮಯೀ ಅವರ ಕೆಲವು ಅನುವಾದಿತ ಕೃತಿಗಳೂ ಆಶ್ರಮದಿಂದ ಪ್ರಕಟಗೊಂಡಿವೆ. ಶ್ರೀಮತಿ ಗಿರಿಜಾ ದೇವಿಯರ ಕೆಲವು ಅನುವಾದಿತ ಕೃತಿಗಳು ಪ್ರಕಟಗೊಂಡಿವೆ. ಹೀಗೆ ಅನೇಕರು ತಮ್ಮ ಸಾಹಿತ್ಯದ ಕೊಡುಗೆಯನ್ನು ಮೈಸೂರು ಪ್ರಕಟನಾ ವಿಭಾಗಕ್ಕೆ ಸಲ್ಲಿಸಿರುವರು. ಇವರೆಲ್ಲರ ಕೊಡುಗೆಯಿಂದ ಈಗ ಪ್ರಕಾಶನ ವಿಭಾಗವು ಬೃಹದಾಕಾರವಾಗಿ ಬೆಳೆದು ನಿಂತಿದೆ. ಕನ್ನಡ ಜನತೆಗೆ ರಾಮಕೃಷ್ಣ-ವಿವೇಕಾನಂದ-ವೇದಾಂತ ಸಾಹಿತ್ಯವನ್ನು ತಲುಪಿಸುವಲ್ಲಿ ಇದು ಮಾಡುತ್ತಿರುವ ಸೇವೆ ಅಪೂರ್ವವಾದುದು. ✽

## ಮೈಸೂರು ಆಶ್ರಮದ ಪ್ರಕಾಶನ ವಿಭಾಗಕ್ಕೆ ಸ್ವಾಮಿ ನಿತ್ಯಸ್ಥಾನಂದರ ಕೊಡುಗೆ

**ಬೆಂ**ಗಳೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿರುವ ಪೂಜ್ಯ ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಪ್ರಕಾಶನ ವಿಭಾಗಕ್ಕೆ ಸಲ್ಲಿಸಿರುವ ಸೇವೆ ದೊಡ್ಡದು. ಅವರು ಮೈಸೂರು ಆಶ್ರಮದಲ್ಲಿ ಬ್ರಹ್ಮಚಾರಿಗಳಾಗಿ ಸೇರಿದಂದಿನಿಂದಲೂ ಸ್ವಾಮಿ ಸೋಮನಾಥಾನಂದಜಿ ಮಹಾರಾಜ್ ಅವರ ಸಾಹಿತ್ಯ ರಚನೆ ಹಾಗೂ ಇನ್ನಿತರ ಕಾರ್ಯಗಳಲ್ಲಿ ನೆರವಾಗುತ್ತಿದ್ದರು. ಸೋಮನಾಥಾನಂದಜಿ ಕೂಡ ಇವರನ್ನು ಬರವಣಿಗೆಯ ಕಾರ್ಯಕ್ಕೆ ಹಚ್ಚಿ, ಪ್ರೋತ್ಸಾಹಿಸುತ್ತಿದ್ದರು.

ಪೂಜ್ಯ ಸ್ವಾಮೀಜಿಯವರ ಲೇಖನಿಯಿಂದ ಮೂಡಿ ಬಂದ ಕೃತಿಗಳಲ್ಲಿ ಅನೇಕ ಅನುವಾದಗಳೂ, ಸ್ವತಂತ್ರ ಕೃತಿಗಳೂ ಸೇರುತ್ತವೆ. ಅವುಗಳಲ್ಲಿ ಪ್ರಮುಖವಾದವು ಹೀಗಿವೆ:

ಅನುವಾದಗಳು: ೧) **ಶ್ರೀರಾಮಕೃಷ್ಣ ಲೀಲಾಪ್ರಸಂಗ** (೨ ಭಾಗಗಳಲ್ಲಿ; *ಮೂಲ ಬಂಗಾಳಿ: ಸ್ವಾಮಿ ಶಾರದಾನಂದ; ಇದೇ ಶೀರ್ಷಿಕೆ*) ೨) **ಅದ್ಭುತವಾಣಿ** (*ಮೂಲ ಬಂಗಾಳಿಯಲ್ಲಿ ಸ್ವಾಮಿ ಅದ್ಭುತಾನಂದರ ಸಂಭಾಷಣೆ*) ೩) **ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ** (*ಮೂಲ ಇಂಗ್ಲಿಷ್: ಸ್ವಾಮಿ ಯತೀಶ್ವರಾನಂದ; ಶೀರ್ಷಿಕೆ: Meditation and Spiritual Life*) ೪) **ಭಾರತೀಯ ಆಧ್ಯಾತ್ಮಿಕ ಪರಂಪರೆ** (*ಮೂಲ ಇಂಗ್ಲಿಷ್: ಸ್ವಾಮಿ ಪ್ರಭವಾನಂದ; ಶೀರ್ಷಿಕೆ: Spiritual Heritage of India*) ೪) **ವಿಶ್ವಗುರು ಸ್ವಾಮಿ ವಿವೇಕಾನಂದ** (*ಸ್ವಾಮೀಜಿ ಸ್ಮೃತಿಸಂಚಯ*) ೫) **ಯೋಗ ಮತ್ತು ಆಧ್ಯಾತ್ಮಿಕ ಸಾಧನೆ** (*ಮೂಲ : ಸ್ವಾಮಿ ಭಜನಾನಂದ*)

ಸ್ವತಂತ್ರ ಕೃತಿಗಳು: ೧) **ಶ್ರೀಮಾತೆ ಶಾರದಾದೇವಿ** ೨) **ಸೋದರಿ ನಿವೇದಿತಾ** ೩) **ಶ್ರೀಮದ್ಭಗವದ್ಗೀತಾ ಚಿಂತನ-ಮಂಥನ** ೪) **ಪರಿಪೂರ್ಣ ವ್ಯಕ್ತಿತ್ವ** ೫) **ಶಿಕ್ಷಕರಿಗಾಗಿ** ೬) **ಏಕಾಗ್ರತೆಯ ಕಲೆ** ೭) **ಪ್ರಾರ್ಥನೆ-ಜಪ-ಧ್ಯಾನ** ೮) **'ನಾನು' ವಿನ ನಾನಾ ಮುಖ** ೯) **ಸಾಧನ ಪಂಚಕ** ೧೦) **ಆಧ್ಯಾತ್ಮಿಕ ಜೀವನದಲ್ಲಿ ಮನೋವಿಶ್ಲೇಷಣೆಯ ಮಹತ್ವ** ೧೧) **ಜೀವನ ಮೌಲ್ಯಗಳು** ೧೨) **ಸ್ಥಿತಪ್ರಜ್ಞನ ಲಕ್ಷಣ** ೧೨) **ವ್ಯಕ್ತಿತ್ವದ ಬೆಳವಣಿಗೆ** ೧೩) **ಸುಖಾನ್ವೇಷಣೆ** ೧೪) **ಕ್ರಿಯಾ ಕೌಶಲ** ೧೫) **ಭಕ್ತನ ಲಕ್ಷಣ** ೧೬) **ರಾಮಕೃಷ್ಣ ಮಹಾಸಂಘ** ೧೭) **ವಿದ್ಯಾರ್ಥಿ ಲಕ್ಷಣ** ೧೮) **ನುಡಿಸಿಂಚನ.**

ಪೂಜ್ಯ ಸ್ವಾಮೀಜಿಯವರು 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಯನ್ನು ಪರಿಷ್ಕರಿಸುವಲ್ಲಿ ಡಾ. ಪ್ರಭುಶಂಕರ ಅವರೊಂದಿಗೆ ವಿಶೇಷ ಶ್ರಮ ವಹಿಸಿದ್ದರು. 'ವಿವೇಕಪ್ರಭ' ಪತ್ರಿಕೆಯ ಮೊದಲ ಸಂಪಾದಕರಾಗಿ, ಬಳಿಕ ವ್ಯವಸ್ಥಾಪಕ ಸಂಪಾದಕರಾಗಿ ಅವರು ನೀಡಿದ ಕೊಡುಗೆ ಕೂಡ ಅತ್ಯಂತ ಮುಖ್ಯವಾದುದು. ✽